ಅ) *ಶಾಂತಿನಗರ ವಿಧಾನಸಭಾ ಕ್ಷೇತ್ರದಲ್ಲಿ 1997-98ನೇ ಸಾಲಿಗೆ ವಸೂಲಾತಿಯಾಗಿರುವ ಒಟ್ಟು ಆಸ್ತಿ ಕಂದಾಯದ ಮೊತ್ತವೆಷ್ಟು?*

ಇ) *ಒಟ್ಟು ಎಷ್ಟು ಸಂಖ್ಯೆಯ ಮಾಲೀಕರ ಸ್ವತ್ತುಗಳಿಗೆ ಇಲ್ಲಿಯವರೆಗೆ ಕಂದಾಯ ನಿಗದಿಪಡಿಸಿರುವುದಿಲ್ಲ?*

ಶ್ರೀ. ಅನಂತ್‌ನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

ಅ) ಶಾಂತಿನಗರ ವಿಧಾನ ಸಭಾ ಕ್ಷೇತ್ರದಲ್ಲಿ ಒಟ್ಟು 32,033 ಸಂಖ್ಯೆಯಷ್ಟು ಆಸ್ತಿ ತೆರಿಗೆ ಪಾವತಿ ಮಾಡುವವರಿದ್ದಾರೆ.

ಆ) ಶಾಂತಿನಗರ ವಿಧಾನ ಸಭಾ ಕ್ಷೇತ್ರದಲ್ಲಿ 1997-98ನೇ ಸಾಲಿಗೆ ವಸೂಲಾಗಿರುವ ಆಸ್ತಿ ಕಂದಾಯದ ಒಟ್ಟು ಮೊತ್ತ ರೂ. 13,65,81,423.00

ಇ) ಈ ವರೆಗೆ ಒಟ್ಟು 743 ಸಂಖ್ಯೆಯ ಸ್ವತ್ತುಗಳಿಗೆ ಕಂದಾಯ ನಿಗದಿಮಾಡಿರುವುದಿಲ್ಲ.

ತುಮಕೂರಿನಲ್ಲಿ ವಿದ್ಯುತ್ ಕಳವು ಪ್ರಕರಣಗಳು.

1805 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಇಂಧನ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ತುಮಕೂರಿನಲ್ಲಿ ಕಳೆದ 6 ತಿಂಗಳಲ್ಲಿ ಕೈಗಾರಿಕೆಗಳು ವಿದ್ಯುತ್ ಕಳವು ಮಾಡಿದ ಪ್ರಕರಣಗಳ ಸಂಖ್ಯೆ ಎಷ್ಟು; (ಅಂತಹ ಕೈಗಾರಿಕೆಗಳ ಪೂರ್ಣ ವಿವರ ಹಾಗೂ ಎಂ.ಡಿ.ಗಳ ಹೆಸರುಗಳನ್ನು ವಿವರವಾಗಿ ನೀಡುವುದು)*

ಆ) *ಹಾಗಿದ್ದಲ್ಲಿ ಕೆ.ಇ.ಬಿ.ಯಲ್ಲಿ ಅಂತಹವರ ವಿರುದ್ಧ ತೆಗೆದುಕೊಂಡ ಕ್ರಮಗಳೇನು;*

ಇ) *ಮಂಡಳಿಯ ಅಧಿಕಾರಿಗಳು ಕಳುವು ಮಾಡುವ ಗ್ರಾಹಕರೊಂದಿಗೆ ಶಾಮಿಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) ತುಮಕೂರಿನಲ್ಲಿ ಕಳೆದ ಆರು ತಿಂಗಳಲ್ಲಿ ಒಂದೇ ಒಂದು ಕೈಗಾರಿಕೆಯು ವಿದ್ಯುತ್ ಕಳವು ಮಾಡಿರುವ ಪ್ರಕರಣವನ್ನು ಪತ್ತೆ ಹಚ್ಚಲಾಗಿದೆ. ಅದರ ಪೂರ್ಣ ವಿವರಗಳನ್ನು ಕೆಳಗೆ ನಮೂದಿಸಲಾಗಿದೆ.

ಕ್ರ.ಸಂ.	*ಕೈಗಾರಿಕೆಯ ಹೆಸರು*	*ಪಾಲುದಾರರ ಹೆಸರು*
1	ಮೆ: ಸಂಟೋವಾಚಸ್	1) ಶ್ರೀಮತಿ ಮೋಹಿನಿ ಉಚ್ಚಿಲ್
		2) ಶ್ರೀಮತಿ ಅನುರಾಧ ಚಂದ್ರಶೇಖರ್

ಅ) ಮಂಡಳಿಯ ಜಾಗೃತ ದಳ ಮತ್ತು ತಾಂತ್ರಿಕ ಪರಿಶೋದನೆ ಘಟಕವು ಅಂತಹ ಪ್ರಕರಣಗಳು ಗಮನಕ್ಕೆ ಬಂದಾಗ ಕಾನೂನು ರೀತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಮಂಡಳಿಯ ಅಧಿಕಾರಿಗಳು ವಿದ್ಯುತ್ ಕಳ್ಳತನ ಪತ್ತೆ ಹಚ್ಚುವ ಕಾರ್ಯದಲ್ಲಿ ನಿರತರಾಗಿರುತ್ತಾರೆಯೇ ಹೊರತು ಅವರುಗಳೊಡನೇ ಶಾಮಿಲಾಗಿರುವುದಿಲ್ಲ.

ಕಳ್ಳಂಬೆಳ್ಳ ಮತ್ತು ಶಿರಾ ಪಟ್ಟಣಗಳಿಗೆ ಹೇಮಾವತಿ ನದಿಯಿಂದ ನೀರು ಸರಬರಾಜು.

1806 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳ್ಳಂಬೆಳ್ಳ ಮತ್ತು ಶಿರಾ ಪಟ್ಟಣಗಳಿಗೆ ಹೇಮಾವತಿ ನದಿಯಿಂದ ನೀರು ಸರಬರಾಜು ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ನಾಲಾ ಕೆಲಸ ಪೂರ್ಣವಾಗದಿದ್ದರೆ ಕೂಡಲೇ ಎಸ್ಕೇಪ್ ನಾಲೆ ನಿರ್ಮಿಸಿ ನೀರು ಸರಬರಾಜು ಮಾಡಲಾಗುವುದೇ?

ಶ್ರೀ. ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) :

ಅ) ಕಳ್ಳಂಬೆಳ್ಳ ಮತ್ತು ಶಿರಾ ಪಟ್ಟಣಗಳಿಗೆ ಹೇಮಾವತಿ ನದಿಯಿಂದ ನೀರು ಸರಬರಾಜು ಮಾಡಲು ಹೇಮಾವತಿ ಯೋಜನೆಯಲ್ಲಿ ಯಾವುದೇ ಅವಕಾಶ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಕಳ್ಳಂಬೆಳ್ಳ ಕ್ಷೇತ್ರದ ಹುಳಿಯೂರಿನ ಅಮಾನಿಕೆರೆ ಕುರಿತು.

1807- ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳ್ಳಂಬೆಳ್ಳ ಕ್ಷೇತ್ರದ ಹುಳಿಯೂರಿನ ಅಮಾನಿ ಕೆರೆಗೆ ಸಂಬಂಧಿಸಿದಂತೆ ಬಸ್‌ಸ್ಟ್ಯಾಂಡಿಗೆ ಹೊಂದಿಕೊಂಡಿರುವ 800:100 ಜಮೀನನ್ನು ಸಣ್ಣ ಪುಟ್ಟ ಪೆಟ್ಟಿಗೆ ಅಂಗಡಿಯವರಿಗೆ ಪುನರ್‌ವಸತಿ ಕಲ್ಪಿಸಲು ಕೋರಿದ್ದು ಅದು ಇನ್ನೂ ಬಿಡುಗಡೆಯಾಗದೇ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಶೀಘ್ರ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಬಂದಿದೆ.

ಆ) ಪರಿಶೀಲನೆಯಲ್ಲಿದೆ.